ಮಧುರ ಭಾವದಲ್ಲಿ ಕಳೆದು ಹೋದಳು.

ತುಸು ಹೊತ್ತು ಕಳೆದ ಮೇಲೆ ಅವಳು 'ಹೇಳು ರಫಿ, ನೀನೇನೋ ಹೇಳುತ್ತಿದ್ದಿಯಲ್ಲಾ?' ಎಂದಳು.

ಅವನು 'ಊಹೂಂ ಕಣೆ, ಹೀಗೆ ಸುಮ್ಮನಿರಲು ನನ್ನಿಂದ ಸಾಧ್ಯವೇ ಇಲ್ಲ. ನೀನು ಬರೆಯುತ್ತಿರಬೇಕು ಇಲ್ಲ ಮಾತಾಡುತ್ತಿರಬೇಕು. ನಾನಿಡೀ ಬದುಕನ್ನು ನಿನ್ನ ಕವಿತೆಗಳನ್ನು ಕೇಳುತ್ತಲೇ, ಓದುತ್ತಲೇ ಇರಬೇಕು' ಎಂದ.

'ನನ್ನ ಪ್ರೀತಿಸುತ್ತೀಯಾ?' ಅವಳದು ನೇರ ಪ್ರಶ್ನೆ. ಒಂದಿಷ್ಟೂ ಗಲಿಬಿಲಿಗೊಳ್ಳದ ಆತ 'ಅಫ್ ಕೋರ್ಸ್, ಅದರಲ್ಲಿ ಕೇಳೋದೇನಿದೆ? ನಿನ್ನ ಅಕ್ಷರ ಪ್ರೀತಿ, ಹುಚ್ಚುತನ, ಬದುಕನ್ನು ಸ್ವೀಕರಿಸುವ ರೀತಿ ಎಲ್ಲವೂ ನನಗಿಷ್ಟ. ಈ ಜೀವ ಇರುವವರೆಗೂ ನಿನ್ನ ಪ್ರೀತಿಸುತ್ತಲೇ ಇರುತ್ತೇನೆ' ಎಂದ.

ಒಂದು ಕ್ಷಣ ತಡೆದ ಸಮೀರಾ ಮತ್ತೆ ಕೇಳಿದಳು– 'ನನ್ನ ಮದುವೆಯಾಗುತ್ತೀಯಾ? ಮನೆಯಲ್ಲಿ ಮಾತಾಡಲಾ?' ಅವನ ಮಾತು ನಿಂತಿತು. ಗಂಟಲ ಪಸೆ ಆರಿತೆಂಬಂತೆ ಒಮ್ಮೆ ಕೆಮ್ಮಿ ಗಂಟಲು ಸರಿಪಡಿಸಿಕೊಂಡು ಎತ್ತಲೋ ನೋಡುತ್ತಾ 'ಆದರೆ ನೀನೀಗಾಗಲೇ ನಿಶ್ಚಿತಾರ್ಥ ಆಗಿರುವ ಹುಡುಗಿ, ನನ್ನ ಮದುವೆ ಆಗುವುದಾದರೂ ಹೇಗೆ?'ಎಂದು ಕೇಳಿದ. ಅವಳು 'ನಾನು ಅಪ್ಪನೊಂದಿಗೆ ಮಾತಾಡಿ ಎಲ್ಲ ಸರಿ ಮಾಡುತ್ತೇನೆ, ಪ್ರಶ್ನೆ ಅದಲ್ಲ. ನೀನು ನನ್ನ ಮದುವೆಯಾಗೋಕೆ ಸಿದ್ಧನಿದ್ದೀಯಾ ಅನ್ನುವುದಷ್ಟೇ ನನಗೆ ಬೇಕಿರುವುದು' ಎಂದಳು.

'ವೆಲ್ ಸಮೀರಾ, ನಿನ್ನ ಬರಹ. ಮಾತು, ಕವಿತೆಗಳೆಲ್ಲಾ ನನಗಿಷ್ಟವೇ. ನಿನ್ನನ್ನು ನಾನು ಪ್ರೀತಿಸುತ್ತೇನೆ ಎನ್ನುವುದು ನಿಜವೇ. ಆದರೆ, ಮದುವೆಯ ವಿಷಯಕ್ಕೆ ಬಂದಾಗ, ತನ್ನ ಎಲ್ಲಾ ಹವ್ಯಾಸಗಳಿಗೆ ಪೂರ್ಣ ವಿರಾಮ ಹಾಕಿ ಅಚ್ಚುಕಟ್ಟಾಗಿ ಸಂಸಾರ ನಡೆಸಿಕೊಂಡು ಹೋಗುವವರಿಗಷ್ಟೆ ನನ್ನ ಆದ್ಯತೆ. ಕಥೆ ಕವಿತೆ ಬರೆಯುತ್ತಾ ಕೂತರೆ ನಾಳೆ ನನ್ನ ಕುಟುಂಬವನ್ನು ನೋಡಿಕೊಳ್ಳುವವರು ಯಾರು?' ಎಂದು ಕೇಳಿದ. ದಿಗ್ಭ್ರಮೆಗೊಳಗಾದ ಸಮೀರ 'ಮತ್ತೆ, ಫೇಸ್‌ಬುಕ್‌ನಲ್ಲಿ ಕವಿ ಮನಸ್ಸಿನ ಹುಡುಗಿ ಬೇಕು ಅಂತ ಸ್ಟೇಟಸ್ ಹಾಕಿಕೊಂಡಿದ್ದಿಯಲ್ಲಾ ಅದೇನು?' ಅಂತ ಪ್ರಶ್ನಿಸಿದಳು.

ಅವನು 'ಸಮೀರಾ, ಇವೆಲ್ಲಾ ನಿನಗೆ ಗೊತ್ತಿಲ್ಲದಿರುವುದೇನಲ್ಲ. ಅದು ಫೇಸ್‌ಬುಕ್ ಆದರ್ಶ ಅಷ್ಟೆ. ಅದನ್ನೆಲ್ಲಾ ಬದುಕಿಗೆ ಅನ್ವಯಿಸುವುದಕ್ಕಾಗುತ್ತಾ? ಮೇಲಾಗಿ ಬರೆದಂತೆ ಬದುಕಬೇಕು ಅನ್ನುವ ನಿಯಮವೇನೂ ಇಲ್ವಲ್ಲಾ?' ಎಂದು ಮರು ಪ್ರಶ್ನಿಸಿದ.

ಬದುಕಿಗೊಂದು, ಫೇಸ್‌ಬುಕ್‌ಗೊಂದು, ಇನ್ನಾವುದೋ ಅಪ್ಲಿಕೇಷನ್‌ಗೆ ಮತ್ತೊಂದು ಅಂತೆಲ್ಲಾ ಆದರ್ಶಗಳಲ್ಲೂ ವೆರೈಟಿಗಳು ಇವೆಯಾ ಎಂಬ ಯೋಚನೆಯೇ ಅವಳ ಹೃದಯದಲ್ಲಿ ವಿಷಣ್ಣತೆಯೊಂದನ್ನು ಹುಟ್ಟು ಹಾಕಿತು. 'ಬರೆದಂತೆಯೇ ಬದುಕುತ್ತಾರೆ ಎನ್ನುವ ನನ್ನ ಸುಂದರ ಭ್ರಮೆಯನ್ನು ಒಡೆದು ಹಾಕಿರುವುದಕ್ಕೆ ಥ್ಯಾಂಕ್ಸ್ ಹೇಳಬೇಕಾ ಇಲ್ಲ ಹಾಗೆ ಬದುಕಬೇಕಿಲ್ಲ ಎನ್ನುವ ಬದುಕಿನ ಅತಿದೊಡ್ಡ ಪ್ರಾಕ್ಟಿಕಾಲಿಟಿಯನ್ನು ಕಲಿಸಿರುವುದಕ್ಕೆ ಥ್ಯಾಂಕ್ಸ್ ಹೇಳಬೇಕಾ ಎನ್ನುವುದು ನನಗರ್ಥವಾಗುತ್ತಿಲ್ಲ ರಫಿ' ಅನ್ನುತ್ತಾ ಅವನ ಹೆಗಲುತಟ್ಟಿ ಕೂತಲ್ಲಿಂದ ಎದ್ದಳು. ಅಷ್ಟರಲ್ಲಿ ಫೋನ್ ರಿಂಗಣಿಸಿತು. ನೋಡಿದರೆ ಸಾದಿಕ್. 'ನೀನು ಕವಿಶೈಲಕ್ಕೆ ಹೋಗಿದ್ದಿ ಅಂತ ಅಪ್ಪ ಹೇಳಿದ್ರು. ಆ ಜಾಗ ನಿನಗೆಷ್ಟು ಮಹತ್ವಪೂರ್ಣ ಎನ್ನುವುದು ನನಗೊತ್ತು. ಇವತ್ತಿಡೀ ನಾನು ನಿನಗೆ ಕರೆ ಮಾಡುವುದಿಲ್ಲ. ರಿಲಾಕ್ಸ್ ಆಗಿರು, ಖುಷಿ ಆಗಿರು' ಎಂದು ಅವಳ ಉತ್ತರಕ್ಕೂ ಕಾಯದೆ ಫೋನ್ ಇಟ್ಟ.

ಎಂತಹ ಮೂರ್ಖತನದ ಕೆಲಸ ಮಾಡುತ್ತಿದ್ದೆ. ಬರೆಯದವನೂ ಚೆನ್ನಾಗಿಯೇ ಬದುಕುತ್ತಾನೆ ಎನ್ನುವ ಅಪ್ಪನ ಮಾತಿನಲ್ಲಿ ಎಷ್ಟು ಸತ್ಯ ಇದೆ. ಇಂಥದ್ದೊಂದು ಸರಳ ಸಂಗತಿ ನನಗೇಕೆ ಅರ್ಥ ಆಗದೇ ಹೋಯಿತು? ಸಾಹಿತ್ಯದೆಡೆಗಿನ ತನ್ನ ಅನಾಸಕ್ತಿಯನ್ನು ತಿಳಿಸುವಾಗಲೂ ಅವನ ಧ್ವನಿಯಲ್ಲಿದ್ದ ಪ್ರಾಮಾಣಿಕತೆ ನನಗೇಕೆ ತಿಳಿಯದೇ ಹೋಯಿತು? ಅಂತೆಲ್ಲಾ ಯೋಚಿಸುತ್ತಾ ಸಮೀರಾ ಅಪ್ಪನಿಗೆ ಕರೆ ಮಾಡಿ 'ಅಪ್ಪಾ, ಕುವೆಂಪಜ್ಜ ನನಗೆ ಸ್ಪಷ್ಟ ದಾರಿಯನ್ನೇ ತೋರಿಸಿದರು. ಈ ಸಂಬಂಧ ನನಗೆ ಸಂಪೂರ್ಣ ಒಪ್ಪಿಗೆ' ಎಂದು ಡಿಸ್ಕನೆಕ್ಟ್ ಮಾಡಿ, ಹಾಗೆಯೇ ಗೇಟಿನ ಬಳಿ ನಿಲ್ಲಿಸಿದ್ದ ಕೈನಿ ಹತ್ತಿ 'ಥ್ಯಾಂಕ್ಸ್ ಫಾರ್ ದಿ ಬ್ಯೂಟಿಫುಲ್ ರೋಸಸ್' ಎನ್ನುತ್ತಾ ರಫಿಯತ್ತ ಕೈ ಬೀಸಿ ಕೈನಿ ಸ್ಟಾರ್ಟ್ ಮಾಡಿದಳು. ವ್ಯಾನಿಟಿ ಬ್ಯಾಗಿನೊಳಗೆ ಭದ್ರವಾಗಿದ್ದ ಲಂಕೇಶರ 'ನೀಲು' ಯಾಕೋ ಒಮ್ಮೆ ನಿರ್ಮಲವಾಗಿ ನಕ್ಕಂತಾಯಿತು.

■

# ಮನ್ವಂತರ

■ ಮೀನಾಕ್ಷಿ ಹೆಂಗವಳ್ಳಿ

ಓಹೋಯ್...!

ಬಲ್ಲಿರೇನಯ್ಯಾ!?

ಇರುವಂಥಾ ಸ್ಥಳ?

ಇಡೀ ಭೂಮಂಡಲದ ಛಪ್ಪನ್ನೈವತ್ತಾರು ದೇಶಗಳ ನಡುವೆ ಹೊಳೆಯುತ್ತಿರುವ ಭರತಖಂಡದ ಏಕಮೇವಾದ್ವಿತೀಯ ಶಾಸನಗಾರ ಯಾರಂತ ಕೇಳಿದ್ದೀರಿ?

ಮನು ಮಹಾರಾಜ!

ನಾವೇ ಸರಿ!

ಈಗ ಇದ್ದಕ್ಕಿದ್ದಂತೆ ಒಡ್ಡೋಲಗ ಸೇರಲು ಏನು ಕಾರಣವೊ?!

